ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ
ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು

ಕೆ.ಎಸ್.ಇ.ಇ.ಬಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03
ದೂರವಾಣಿ ಸಂಖ್ಯೆ: 23341615, 23562283, ಫ್ಯಾಕ್ಸ್: 080-23347670 e-mail:ksqaacbangalore@gmail.com

ಸಂಖ್ಯೆ: ಕೆ.ಎಸ್.ಕ್ಯು.ಎ.ಎ.ಸಿ/ಕ್ರಿಯೋ/14/2018-19 ದಿನಾಂಕ:10-10-2018

## ಜ್ಞಾಪನ

ವಿಷಯ:- 2018-19 ನೇ ಸಾಲಿನ ಗಣತಿ ಆಧಾರಿತ ರಾಜ್ಯ ಕಲಿಕಾ ಸಾಧನಾ ಸಮೀಕ್ಷೆ (CSAS-SA1) ಯನ್ನು ಮುಂದೂಡಿರುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ: ಇಡಿ30ಎಂ.ಸಿ.ಡಿ. -2018, ಬೆಂಗಳೂರು, ದಿನಾಂಕ: 06-09-2018.
2) ಅಧಿಸೂಚನೆ ಸಂಖ್ಯೆ: ಕೆ.ಎಸ್.ಕ್ಯೂ.ಎ.ಎ.ಸಿ./ಕ್ರಿ.ಯೋ-2018-19/14/2018-19, ದಿನಾಂಕ: 11.09.2018.
3) ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ(ರಿ) ಮನವಿ ಪತ್ರದ ಸಂಖ್ಯೆ 163.2017-18 ದಿನಾಂಕ:09.10.2018.

~*~*~*~

ಮೇಲ್ಕಂಡ ವಿಷಯ ಹಾಗೂ ಉಲ್ಲೇಖ 1 ಮತ್ತು 2 ರನ್ವಯ 2018-19ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ 4 ರಿಂದ 10ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ ಮತ್ತು ಸ್ವ-ಇಚ್ಛೆಯಿಂದ ಭಾಗವಹಿಸುತ್ತಿರುವ 10ನೇ ತರಗತಿಯ ಅನುದಾನರಹಿತ ಶಾಲೆಗಳ ವಿದ್ಯಾರ್ಥಿಗಳಿಗೆ ಗಣತಿ ಆಧಾರಿತ ರಾಜ್ಯ ಕಲಿಕಾ ಸಾಧನಾ ಸಮೀಕ್ಷೆ (CSAS-SA1) ಯನ್ನು ದಿನಾಂಕ: 25.10.2018 ಹಾಗೂ 26.10.2018 ರಂದು ಕೈಗೊಳ್ಳಲು ತೀರ್ಮಾನಿಸಲಾಗಿತ್ತು. ಉಲ್ಲೇಖ-3 ಪತ್ರದ ಕೋರಿಕೆಯನ್ವಯ ಸದರಿ ಸಮೀಕ್ಷೆಯನ್ನು **ದಿನಾಂಕ:29.10.2018 ಮತ್ತು 30.10.2018** ರಂದು ನಡೆಸಲಾಗುವುದು.

**ದಿನಾಂಕ:29.10.2018 ರಂದು ಭಾಷಾ ವಿಷಯ ಹಾಗೂ ದಿನಾಂಕ: 30.10.2018 ರಂದು ಕೋರ್ ವಿಷಯಗಳಿಗೆ** ಸಂಬಂಧಿಸಿದಂತೆ ಸಮೀಕ್ಷೆಯನ್ನು ನಡೆಸಲಾಗುವುದು. ಸಂಬಂಧಿಸಿದ ಜಿಲ್ಲೆ ಹಾಗೂ ಬ್ಲಾಕ್ ಹಂತದ ಅಧಿಕಾರಿಗಳು ಪರೀಕ್ಷಾ ದಿನಾಂಕದ ಬದಲಾವಣೆಯ ಬಗ್ಗೆ ತಮ್ಮ ವ್ಯಾಪ್ತಿಯ ಎಲ್ಲಾ ಶಾಲಾ ಮುಖ್ಯ ಶಿಕ್ಷಕರಿಗೆ ಸೂಕ್ತ ಮಾಹಿತಿಯನ್ನು ನೀಡುವುದು. ಸದರಿ ದಿನಾಂಕಕ್ಕೆ ಪೂರ್ವ ಸಿದ್ಧತೆಯನ್ನು ಮಾಡಿಕೊಂಡು ಸಮೀಕ್ಷಾ ಕಾರ್ಯವನ್ನು ಯಶಸ್ವಿಗೊಳಿಸಲು ತಿಳಿಸಲಾಗಿದೆ.

ಕಾರ್ಯನಿರ್ವಾಹಕ ನಿರ್ದೇಶಕರು
ಕೆ.ಎಸ್.ಕ್ಯು.ಎ.ಎ.ಸಿ 10/10/18

ಪ್ರತಿಯನ್ನು:-

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ), ಮತ್ತು ಉಪನಿರ್ದೇಶಕರು (ಅಭಿವೃದ್ಧಿ) ರವರಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಜಿಲ್ಲಾ ಹಾಗೂ ತಾಲ್ಲೂಕು CSAS ನೋಡಲ್ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
4. ಅಧ್ಯಕ್ಷರು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ(ರಿ) ಬೆಂಗಳೂರು ರವರಿಗೆ ಮಾಹಿತಿಗಾಗಿ.
5. ಕಛೇರಿ ಪ್ರತಿ.